


International Journal of Kannada Research
www.kannadajournal.com

**ISSN: 2454–5813**
IJKR 2020; 6(4): 83-85
© 2020 IJKR
www.kannadajournal.com
Received: 21-08-2020
Accepted: 06-10-2020

**ಎಸ್.ಸಿದ್ದೇಗೌಡ**
ಕನ್ನಡ ಸಹಾಯಕ ಪ್ರಾಧ್ಯಾಪಕರು,
ಮಹಾರಾಣಿ ಮಹಿಳಾ ವಿಜ್ಞಾನ
ಕಾಲೇಜು (ಸ್ವಾಯತ್ತ), ಮೈಸೂರು,
ಕರ್ನಾಟಕ, ಭಾರತ

**Corresponding Author:**
**ಎಸ್.ಸಿದ್ದೇಗೌಡ**
ಕನ್ನಡ ಸಹಾಯಕ ಪ್ರಾಧ್ಯಾಪಕರು,
ಮಹಾರಾಣಿ ಮಹಿಳಾ ವಿಜ್ಞಾನ
ಕಾಲೇಜು (ಸ್ವಾಯತ್ತ), ಮೈಸೂರು,
ಕರ್ನಾಟಕ, ಭಾರತ

# ಸಿದ್ಧಾರ್ಥ ಬುದ್ಧನಾಗುವ ರಾತ್ರಿ: ಮಹಾರಾತ್ರಿ

**ಎಸ್.ಸಿದ್ದೇಗೌಡ**

ಹೊಸಗನ್ನಡ ಸಾಹಿತ್ಯದ ಮೇರು, ಸದೃಶ ವ್ಯಕ್ತಿತ್ವ, ಯುಗದ ಕವಿ ಹಾಗೂ ಜಗದ ಕವಿಯಾದ ಕುವೆಂಪು ಅವರು ಕನ್ನಡ ಸಾಹಿತ್ಯಕ್ಕೆ ಮಕ್ಕಳ ನಾಟಕಗಳೂ ಸೇರಿದಂತೆ 14 ನಾಟಕಗಳನ್ನು ಕೊಡುಗೆಯಾಗಿ ನೀಡಿರುವುದಲ್ಲದೆ, ಕನ್ನಡ ನಾಟಕ ಸಾಹಿತ್ಯದ ಔನತ್ಯವನ್ನು ಮತ್ತಷ್ಟು ಎತ್ತರಿಸಿದ್ದಾರೆ. ಮಹಾಭಾರತ ಮತ್ತು ರಾಮಾಯಣದ ಪೌರಾಣಿಕ ವಸ್ತುಗಳನ್ನೇ ನಾಟಕದ ವಸ್ತುಗಳನ್ನಾಗಿ ಆಯ್ದುಕೊಂಡರೂ ಅದಕ್ಕೊಂದು ಹೊಸ ಸ್ಪರ್ಶವನ್ನೂ ವೈಚಾರಿಕತೆಯ ನೆಲೆಯನ್ನೂ ನೀಡಿದ್ದಾರೆ. ಈ ರೀತಿಯ ವೈಚಾರಿಕತೆಯ ನಿಲುವನ್ನು ಅವರ ಎಲ್ಲಾ ಪ್ರಕಾರದ ಸಾಹಿತ್ಯದಲ್ಲೂ ಕಾಣಬಹುದಾದರೂ ನಾಟಕ ಸಾಹಿತ್ಯದಲ್ಲಿ ಸ್ವಲ್ಪ ಅಧಿಕವಾಗಿಯೇ ಕಾಣಬಹುದು. ಇದು ಅವರ 'ಮಹಾರಾತ್ರಿ' ನಾಟಕದಲ್ಲೂ ಹೊರತಾಗಿಲ್ಲ.

ಗೌತಮ ಬುದ್ಧನನ್ನು ಇತಿಹಾಸದಲ್ಲಿ ಚಿತ್ರಿಸಿರುವ ಬಗೆಗೂ ಕನ್ನಡ ಸಾಹಿತ್ಯದಲ್ಲಿ ಸಾಹಿತಿ, ಕವಿ ಹಾಗೂ ನಾಟಕಕಾರರು ಚಿತ್ರಿಸಿರುವ ಬಗೆಗೂ ಬಹಳ ವ್ಯತ್ಯಾಸವಿದೆ. ಇತಿಹಾಸ ಗೌತಮಬುದ್ಧನ ಪೂರ್ವನಾಮ ಸಿದ್ಧಾರ್ಥ. ಆತ ಕಪಿಲವಸ್ತುವಿನ ದೊರೆಯಾದ ಶುದ್ಧೋಧನನ ಮಗ. ಹುಟ್ಟಿದ ಸಂದರ್ಭದಲ್ಲಿ ಜ್ಯೋತಿಷಿಗಳು ಸಮಾಜದಲ್ಲಿ ಘಟಿಸುವ ಘಟನೆಗಳ ಫಲವಾಗಿ ಆತ ಅರಮನೆಯಿಂದ ದೂರಾಗಿ, ಮಹಾನ್ ವಿರಾಗಿಯಾಗುತ್ತಾನೆ ಎಂದು ಕಾರಣಿಕ ನುಡಿಯುತ್ತಾರೆ. ಮಗನ ಆ ಪರಿವರ್ತನೆಯನ್ನು ಸಹಿಸದ ದೊರೆ ಸಮಾಜದಿಂದ ಮಗನನ್ನು ಪ್ರತ್ಯೇಕಿಸಿ, ಸಕಲವೂ ಅರಮನೆಯಲ್ಲಿಯೇ ದೊರೆಯುವಂತೆ ಏರ್ಪಾಡು ಮಾಡಿ ಬೆಳಸುತ್ತಾನೆ. ಮುಂದೆ ಬೆಳೆದು ದೊಡ್ಡವನಾದ ಮೇಲೆ ಸಮಾಜದ ಸಂಪರ್ಕಕ್ಕೆ ಬಂದ ಸಂದರ್ಭ ಸಮಾಜದಲ್ಲಿ ಘಟಿಸಿದ ಅಥವಾ ಘಟಿಸುತ್ತಿರುವ ಘಟನೆಗಳ ಅರಿವಿಲ್ಲದ ಸಿದ್ಧಾರ್ಥ ಆಶ್ಚರ್ಯ ಚಕಿತನಾಗಿ ಕಾರಣದ ಹುಡುಕಾಟಕ್ಕೆ ತನ್ನನ್ನು ತೊಡಗಿಸಿಕೊಳ್ಳುತ್ತಾನೆ. ಅದಕ್ಕಾಗಿ ರಾಜ್ಯ, ಸಂಪತ್ತು, ಕುಟುಂಬ, ಮಡದಿ, ಮಗನನ್ನು ತ್ಯಜಿಸುತ್ತಾನೆ. ಮುಂದೆ ನಿರಂತರ ಪ್ರಯತ್ನದ ಫಲವಾಗಿ ಜ್ಞಾನೋದಯವಾಗಿ ಬುದ್ಧನಾದ ಎಂಬುದಾಗಿ ತಿಳಿಸುತ್ತದೆ.

ಇದೇ ವಸ್ತುವನ್ನು ತಮ್ಮ ಕಾವ್ಯದ ಮತ್ತು ನಾಟಕದ ವಸ್ತುವನ್ನಾಗಿ ಇಟ್ಟುಕೊಂಡಿರುವ ಸಾಹಿತಿಗಳು ಸಿದ್ಧಾರ್ಥನ ಜೀವನವನ್ನು ವಿಭಿನ್ನವಾಗಿ ನೋಡುವ, ಅದರಲ್ಲೂ ಹೊಸ ಹೊಳಹನ್ನು ಹುಡುಕುವ ಪ್ರಯತ್ನ ಮಾಡಿದ್ದಾರೆ. ಈ ದಿಸೆಯಲ್ಲಿಯೇ ರಚಿತವಾಗಿರುವುದು ಕುವೆಂಪು ಅವರ ಮಹಾರಾತ್ರಿ. ಸುಧೀರ್ಘವಾದ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಕವನ, ಕಥೆ, ಕಾದಂಬರಿ, ನಾಟಕ ಹಾಗೂ ಕಾವ್ಯ ಹೀಗೆ ಸಾಹಿತ್ಯದ ಎಲ್ಲ ಪ್ರಕಾರಗಳ ವಸ್ತುವಾಗಿರುವ ಬುದ್ಧ ಮತ್ತು ಬುದ್ಧನ ವ್ಯಕ್ತಿತ್ವ ಬಹಳ ಪ್ರಮುಖವಾದುದು. ಹಾಗೆಯೇ ಕುವೆಂಪು ಅವರ 'ಮಹಾರಾತ್ರಿ' ನಾಟಕಕ್ಕೂ ಬುದ್ಧನ ವ್ಯಕ್ತಿತ್ವವೇ ಆಧಾರವಾಗಿದೆ. ನಾಟಕದಲ್ಲಿ ಕುವೆಂಪು ಅವರ ವೈಚಾರಿಕ ಪ್ರಜ್ಞೆ, ಧಾರ್ಮಿಕ ಪ್ರಜ್ಞೆ, ಆಧ್ಯಾತ್ಮಿಕ ಪ್ರಜ್ಞೆ ಮತ್ತು ಮಾನವೀಯ ಪ್ರಜ್ಞೆಗಳು ಕೂಡ ಮೇಳೈಸಿವೆ.

ಮಹಾರಾತ್ರಿ ಎಂಬುದು ಇಡೀ ನಾಟಕದ ಘಟನೆಗಳೆಲ್ಲವೂ ಆ ಒಂದೇ ರಾತ್ರಿಯ ಅವಧಿಯಲ್ಲಿ ನಡೆಯುವುದರಿಂದ ಇದು ಸುಧೀರ್ಘವಾದ ರಾತ್ರಿ ಎಂಬರ್ಥದಲ್ಲಿಯೂ, ಸಿದ್ಧಾರ್ಥ ಬುದ್ಧನಾಗಿ ಪರಿವರ್ತನೆ ಹೊಂದಿದ ಎಂಬರ್ಥದಲ್ಲಿಯೂ ಹಾಗೆಯೇ ಭಾರತದ ಇತಿಹಾಸದ ದಿಕ್ಕನ್ನು ಬದಲಾಯಿಸಿದ ಬಹಳ ಪ್ರಮುಖವಾದ ರಾತ್ರಿ ಎಂಬರ್ಥದಲ್ಲಿಯೂ ಮಹಾರಾತ್ರಿಯಾಗಿದೆ.

ನಾಟಕ ಪ್ರತಿಮಾತ್ಮಕ ನೆಲೆಯಲ್ಲಿ ರಚಿತವಾಗಿದೆ. ನಾಟಕ ಆರಂಭವಾಗುವುದು ರಾತ್ರಿಯ ಕತ್ತಲೆಯಲ್ಲಿ, ಮುಕ್ತಾಯವಾಗುವುದು ಸೂರ್ಯೋದಯದ ಬೆಳಕಿನಲ್ಲಿ. ಈ ರೀತಿಯ ನಾಟಕದ ರಚನೆ ಬಹಳ ಕುತೂಹಲಕಾರಿಯಾದುದು. ಅದು ಬೇರೆಯದೇ ಆದ ವಿಶೇಷಾರ್ಥವನ್ನು ನೀಡುತ್ತಾ ಹೊಗುತ್ತದೆ. ಕತ್ತಲು ಎಂಬುದು ಅಜ್ಞಾನ, ಅಂಧಕಾರದ ಸಂಕೇತವಾಗಿ ಬಳಕೆಯಾದರೆ, ಬೆಳಕು ಎಂಬುದು ಜ್ಞಾನದ

ಸಂಕೇತವಾಗುತ್ತದೆ. "ತಮಸೋಮ ಜ್ಯೋತಿರ್ಗಮಯ" ಕತ್ತಲಿನಿಂದ ಬೆಳಕಿನೆಡೆಗೆ ಎಂಬಂತೆ, ಅಜ್ಞಾನದ ಅಂಧಕಾರದಲ್ಲಿರುವ ಭರತಭೂಮಿಗೆ ಜ್ಞಾನದ ಬೆಳಕನ್ನು ನೀಡಲು ಸಿದ್ಧಾರ್ಥ ಅನುವಾದ ರಾತ್ರಿ, ಹಾಗೇಯೇ ಅಜ್ಞಾನದ ಅಂಧಕಾರದಲ್ಲಿದ್ದ ಸಿದ್ಧಾರ್ಥ ಕೂಡ ಸತ್ಯವೆಂಬ ಬೆಳಕನ್ನು ಹುಡುಕಿ ಹೊರಡುವುದು ಇವೇ ಮೊದಲಾದ ವೈಚಾರಿಕತೆಯ ಹಿನ್ನಲೆಯಲ್ಲಿ ನಾಟಕದ ರಚನೆಯಾಗಿದೆ. ನಾಟಕದ ಘಟನೆಗಳೆಲ್ಲವೂ ಘಟಿಸುವುದು ರಾತ್ರಿಯ ಕತ್ತಲಿನಲ್ಲಿಯೇ, ರಾತ್ರಿಯ ಕತ್ತಲೆಯಲ್ಲಿ ಮರೆಯಾಗುವ ಸಿದ್ಧಾರ್ಥ ಸೂರ್ಯೋದಯದ ಬೆಳಕನ್ನು ಅಹ್ವಾನಿಸುವುದರ ಮೂಲಕ ನಾಟಕ ಕೊನೆಗೊಳ್ಳುತ್ತದೆ ಎಂಬುದೇ ವಿಶೇಷವಾಗಿದೆ.

ಪೀಠಿಕಾ ದೃಶ್ಯ ಮತ್ತು ಉಪಸಂಹಾರ ದೃಶ್ಯ ಸೇರಿ ಒಟ್ಟು 12 ದೃಶ್ಯಗಳಲ್ಲಿ ಸಿದ್ಧಾರ್ಥನ ವ್ಯಕ್ತಿತ್ವವನ್ನು ಅಧಿಕಾರಯುತವಾಗಿ ಹಿಡಿದಿಡುವ ಪ್ರಯತ್ನವನ್ನು ಕುವೆಂಪು ಅವರು ಮಾಡಿದ್ದಾರೆ. ಇಡೀ ನಾಟಕದಲ್ಲಿ ಕಂಡು ಬರುವ ಪ್ರಮುಖ ಎರಡು ಅಂಶಗಳೆಂದರೆ ಸಿದ್ಧಾರ್ಥನ ದೃಢ ನಿರ್ಧಾರ ಮತ್ತು ಮಹಾಪರಿತ್ಯಾಗ. ಈ ಎರಡು ಅಂಶಗಳ ಆಧಾರದ ಮೇಲೆ ಸಿದ್ಧಾರ್ಥನ ವ್ಯಕ್ತಿತ್ವವನ್ನು ನಾಟಕದಲ್ಲಿ ಹಿಡಿದಿಡಲಾಗಿದೆ. ಇದಲ್ಲದೆ ಕುವೆಂಪು ಅವರಲ್ಲಿರುವ ವೈಚಾರಿಕತೆ ನಾಟಕದುದ್ದಕ್ಕೂ ಜಾಗೃತವಾಗಿದೆ. ನಾಟಕದ ಆರಂಭದಲ್ಲಿಯೇ ಸಿದ್ಧಾರ್ಥ ಬುದ್ಧನಾಗಲೇಬೇಕು ಕಾರಣ ಹಿಂದೂ ಧರ್ಮ ಯಜ್ಞ-ಯಾಗಾದಿಗಳ ಭಾರದಲಿ ಕುಗ್ಗಿ, ಶ್ರೀಸಾಮಾನ್ಯನ ಸುಲಿಗೆ ನಡೆಯುತ್ತಿದೆ. ಇದಕ್ಕೆ ಪರಿಹಾರ ಅಥವಾ ಪರ್ಯಾಯ ಎಂದರೆ ಅದು ಬುದ್ಧನ ಬೌದ್ಧಧರ್ಮ ಎಂಬುದು ನಾಟಕಕಾರರ ಅಚಲವಾದ ನಂಬಿಕೆ. ಅಂದರೆ ಆ ವೇಳೆಗೆ ಹಿಂದೂ ಧರ್ಮದಲ್ಲಿ ಮೌಢ್ಯತೆ ಅಧಿಕವಾಗಿ ಸಾಮಾನ್ಯ ಜನರನ್ನು ಸಮಾಜದ ಒಂದು ವರ್ಗ (ಪುರೋಹಿತಶಾಹಿ) ಶೋಷಣೆಗೆ ಒಳಪಡಿಸಿ, ಯಜ್ಞ, ಯಾಗಾದಿಗಳ ಹೆಸರಿನಲ್ಲಿ ಅವರನ್ನು ಹಿಂಸಿಸಲಾಗುತ್ತಿತ್ತು. ಅದರಿಂದ ಬೇಸತ್ತ ಸಾಮಾನ್ಯ ಜನರು ಹಿಂದೂ ಧರ್ಮದ ಪರ್ಯಾಯದ ಹುಡುಕಾಟದಲ್ಲಿದ್ದರು. ಅವರ ಹುಡುಕಾಟಕ್ಕೆ ಉತ್ತರ ಎಂದರೆ ಬೇರೆಯದೇ ಆದ ಧರ್ಮ. ಅವರ ಉದ್ಧಾರಕ್ಕಾಗಿಯಾದರೂ ಸಿದ್ಧಾರ್ಥ ಬುದ್ಧನಾಗಲೇಬೇಕು ಎಂಬುದು ಕುವೆಂಪು ಅವರ ಆಶಯವಾಗಿರುವುದು ನಾಟಕದ ಆರಂಭದ ಭಾಗದಲ್ಲಿಯೇ ವ್ಯಕ್ತವಾಗುತ್ತದೆ. ಹಾಗಾಗಿಯೇ ನಾಟಕದ ಪೀಠಿಕಾ ದೃಶ್ಯದಲ್ಲಿ ಸಿದ್ಧಾರ್ಥ ಬುದ್ಧನಾಗುವ ಸಂಭ್ರಮ ಕಿನ್ನರ, ಯಕ್ಷ ಮತ್ತು ಗಂಧರ್ವರ ಮಾತುಗಳಲ್ಲಿ ಕಾಣಸಿಗುತ್ತದೆ.

**ಕಿನ್ನರ:** ಇದು ಮಹಾರಾತ್ರಿ; ಸಿದ್ಧಾರ್ಥ ಬುದ್ಧನಾ
ಗುವ ರಾತ್ರಿ; ಸಗ್ಗದೊಲವಿಳೆಗಿಳಿವ ರಾತ್ರಿ.
**ಯಕ್ಷ:** ಜೀವಜ್ಯೋತಿಯದೊಂದು ಧರೆಯ ಮೇಲ್ಮೈತಂದು
ಬುದ್ಧರೂಪದಿ ನಿಂದು ಮೈದೋರುವುದು ಇಂದು!
**ಗಂಧರ್ವ:**ಹಾಗಾದರಿಂದು ಭಾರತಾಂಬೆಯೆ ಧನ್ಯೆ!
**ಕಿನ್ನರ:** ಅಲ್ಲವೇ, ಗಂಧರ್ವ!
**ಯಕ್ಷ:** ಯಜ್ಞಯಾಗಾದಿಗಳ
ಹಿಂಸೆಯಲಿ ಬೆಂದು, ಕೃತ್ರಿಮದ ವೈದಿಕರ
ದೌಷ್ಟ್ಯದೊಳು ನೊಂದು, ಒಣವೇದ ಪಂಡಿತರ
ವಾದದೊಳು ಮುಳುಮುಳುಗಿ ಗೋಳಿಡುವ ಭಾರತೀಯ
ಪುಣ್ಯಗಗನದ ಪೂರ್ವದೊಳು, ನೋಡು, ಹರ್ಷದರು
ಣೋದಯವು ಶೋಭಿಸುವುದೆಂತು!

ಹೀಗೆ ಯಕ್ಷ, ಕಿನ್ನರ ಮತು ಗಂಧರ್ವರಲ್ಲಿ ಸಿದ್ಧಾರ್ಥ ಬುದ್ಧನಾಗುತ್ತಿರುವುದರ ಬಗ್ಗೆ ಸಂಭ್ರಮ ಮನೆ ಮಾಡಿರುವುದನ್ನು ತಿಳಿಸುತ್ತಲೇ ನಾಟಕಕಾರರು ಕೂಡ ತಮ್ಮ ಮನದ ಇಂಗಿತವನ್ನು ವ್ಯಕ್ತ ಪಡಿಸುತ್ತಿರುವ ಹಾಗೆ ಗೋಚರವಾಗುತ್ತದೆ. ಆ ಮೂಲಕ ಪ್ರಸ್ತುತ ಸಂದರ್ಭದಲ್ಲಿನ ಭಾರತೀಯ ದಯನೀಯ ಪರಿಸ್ಥಿತಿ, ಅದರಾಚೆ ಸಾಗಲು ಬೇಕಾದ ಪರ್ಯಾಯ ಮಾರ್ಗವನ್ನು ತಿಳಿಸುವ ರೀತಿಯಲ್ಲಿಯೂ ಕಾಣಿಸುತ್ತದೆ.

ಸಿದ್ಧಾರ್ಥ ತಾನು ಈಗಾಗಲೇ ಕಂಡ ಮುದುಕ, ರೋಗಿ, ಹೆಣ ಮತ್ತು ಯೋಗಿಯ ಕಾರಣವಾಗಿ ಜಗತ್ತು ಏಕೆ ಹೀಗೆ? ಇದಕ್ಕೆ ಕಾರಣ ಮತ್ತು ಪರಿಹಾರಗಳೇನು? ಎಂಬ ಹುಡುಕಾಟದಲ್ಲಿದ್ದಾನೆ. ಅಲ್ಲದೆ ಬಡತನ, ಮೌಢ್ಯಾಂಧಕಾರದಲ್ಲಿ ಇಡೀ ಲೋಕ ನರಳುತ್ತ, ಭಾರತಾಂಬೆ ದಾರಿ ತಪ್ಪಿ ಕಾಡುಪಾಲಾಗಿರುವುದನ್ನು ನೋಡಿಯೂ ಆತ ಸುಮ್ಮನಿರಲಾರದವನಾಗಿದ್ದಾನೆ. ಹಾಗಾಗಿ ಇವೆಲ್ಲವನ್ನೂ ಸರಿಪಡಿಸುವ ತವಕದಿಂದ ಅರಮನೆಯಿಂದ ದೂರಾಗಬೇಕೆಂಬ ದೃಢ ನಿರ್ಧಾರವನ್ನು ಸಿದ್ಧಾರ್ಥ ಮಾಡಿದ್ದಾನೆ. ಅದೂ ಇಂದೇ ಈ ರಾತ್ರಿಯೇ. ಕಾರಣ ಈ ಮೊದಲು ನಾಳೆ ನಾಳೆ ಎಂದು ವರ್ಷಗಳನ್ನು ಕಳೆದಾಗಿದೆ. ಹಾಗಾಗಿ ನಾಳೆ ನಾಳೆಯೇ ಇಂದು ಇಂದೇ ಎಂಬ ದೃಢ ನಿರ್ಧಾರಕ್ಕೆ ಬಂದಿದ್ದಾನೆ. ಆದರೆ ಅದೇ ಸಮಯಕ್ಕೆ ಸರಿಯಾಗಿ ಮಗನ ಜನನದ ಸುದ್ದಿ ಬರುತ್ತದೆ. ಸಿದ್ಧಾರ್ಥನಿಗೆ ಅದು ಸಂತಸದ ಸುದ್ದಿಯಾಗಿರದೆ ಮತ್ತೊಂದು ಬಂಧನದ ಹಾಗೇ ಗೋಚರವಾಗುತ್ತದೆ. ಅದನ್ನೂ ಮೀರಿ ಸಾಗುವ ನಿರ್ಧಾರ ಆತನದು. ಹಾಗಾಗಿ ಅರಮನೆಯಿಂದ ತೆರಳಲು ತನ್ನ ನೆಚ್ಚಿನ ಸಖ ಚನ್ನನ ನೆರವು ಪಡೆಯುತ್ತಾನೆ. ಚನ್ನನಾದರೋ ತನ್ನ ಒಡೆಯನಿಗೆ ಸಹಕಾರಿಯಾಗಿರಬೇಕೋ ಅಥವಾ ವಿರುದ್ಧವಾಗಿರಬೇಕೋ ತಿಳಿಯದ ಗೊಂದಲದಲ್ಲಿದ್ದರೂ ಆತನಿಗೆ ನೆರವಾಗುವ ಮಾತು ನೀಡುತ್ತಾನೆ. ಅಲ್ಲದೆ ಹೇಗಾದರೂ ಮಾಡಿ ಸಿದ್ಧಾರ್ಥನನ್ನು ತಡೆಯುವ ಪ್ರಯತ್ನ ಮಾಡುತ್ತಾನೆ. ಅದಕ್ಕಾಗಿ ರಾಲನ ಮೂಲಕ ಆ ನಡುರಾತ್ರಿಯಲ್ಲಿ ಸಿದ್ಧಾರ್ಥನನ್ನು ಬೆದರಿಸುವ ವಿಫಲ ಪ್ರಯತ್ನ ಮಾಡುತ್ತಾನೆ. ಕಾರಣ ಅಂದು ಆತನನ್ನು ತಡೆದರೆ ಆತನ ಮನಸ್ಸಿನಲ್ಲಿ ಇರುವ ಆ ದೃಢನಿರ್ಧಾರ ಬದಲಾಗಬಹುದು ಎಂಬ ಆಸೆ. "ಪರಮೇಶ, ನನ್ನೊಡೆಯನಿಂದು ಹೋಗದ ತೆರದಿ ಮಾಡು. ಪುಣ್ಯಾತ್ಮನಾತನನು ಕೃಪೆಯಿಂದ ಕಾಪಾಡು!" ಎಂದು ಆತನಾಡುವ ಮಾತುಗಳ ಮೂಲಕ ಆತನ ಮನದ ಆ ಭಾವನೆಯನ್ನು ಅರಿಯಬಹುದು. ಆದರೆ ಆ ಪ್ರಯತ್ನವೂ ಕೂಡ ಸಿದ್ಧಾರ್ಥನ ದೃಢನಿರ್ಧಾರದ ಮುಂದೆ ನಿಷ್ಫಲವಾಗುತ್ತದೆ.

ನಾಟಕದಲ್ಲಿ ಸಿದ್ಧಾರ್ಥ ಮತ್ತು ಮಾರ (ಮನ್ಮಥ)ರ ಸಮಾಗಮ ಮತ್ತು ಅವರ ನಡುವೆ ನಡೆಯುವ ಸಂಭಾಷಣೆ ಬಹಳ ಪ್ರಮುಖವಾದುದು. ಮಹಾಪರಿತ್ಯಾಗಕ್ಕೆ ಸಿದ್ಧನಾಗಿರುವ ಸಿದ್ಧಾರ್ಥನನ್ನು ಮಾರ ಪರೀಕ್ಷೆಗೆ ಒಳಪಡಿಸುತ್ತಾ "ಸಿದ್ಧಾರ್ಥ, ಸ್ವಪ್ನಸ್ಥನ್ ಆಗಿರುವೆ. ಜಾಗ್ರತನ ಮಾತಲ್ಲವೀ ನುಡಿ. ಬಣಗು ವೇದಾಂತವಿದು. ಜಡರ ಸಿದ್ಧಾಂತವಿದು. ಮುಕ್ತಿಯೆಂಬುದೆಲ್ಲಿ? ಬಡ ಶಾಂತಿಯೆಲ್ಲಿ? ಮರುಳನಂತಾಡುತಿಹೆ. ಅರಮನೆಯ ಸಿರಿಯ ತೊರೆದರಸಲುಳಿದ ಸಿರಿ ದೊರಕುವುದೆ? ಹುಸಿಮಾತು, ಇಹಸುಖವನರಿತಿಹೆವು, ಪರಸುಖವದೆಂತಹುದೊ? ಕರದೊಳಿಹ ರನ್ನವದು ಮಿಗಿಲು ಶರಧಿಯ ಸಿರಿಗೆ! ಪರಸುಖವ ಪಡೆಯಲೆಂದಿಹಸುಖವ ಬಿಡುವೆಯಾ? ಜೋಕೆ!" ಎಂದು ಎಚ್ಚರಿಸುವುದರ ಜೊತೆಗೆ ಸರ್ವ ಸಾಮ್ರಾಜ್ಯದ ಅಧಿಕಾರ ಪಟ್ಟದ ಆಸೆಯನ್ನು ತೋರಿಸಿ ಆತನನ್ನು ತಡೆಯುವ ಪ್ರಯತ್ನ ಮಾಡುತ್ತಾನೆ. ಅದಕ್ಕೂ ಆತ ಬಾಗದಿದ್ದಾಗ ಹೆತ್ತ ತಂದೆ, ತಾಯಿ ಮತ್ತು ಕಟ್ಟಿಕೊಂಡ ಪತ್ನಿಯನ್ನು ದುಃಖಕ್ಕೆ ನೂಕಿ ತೆರಳುತ್ತಿರುವ ಕರುಣಾ ಭಾವದ ಅಸ್ತ್ರವನ್ನು ಸಿದ್ಧಾರ್ಥನ ಮುಂದಿಡುತ್ತಾನೆ. ಅದಕ್ಕೆ ಸಿದ್ಧಾರ್ಥ ಕೊಡುವ ಉತ್ತರ ಹೃದಯಂಗಮವಾಗಿದೆ. "ಪೊರಮಡುವುದೀ ಭೋಗ ಸಾಮ್ರಾಜ್ಯಕ್ಕಲ್ಲ ಮಾರ, ಮುಕ್ತಿ ಸಾಮ್ರಾಜ್ಯಕ್ಕೆ. ಬ್ರಹ್ಮಾಂಡದಲ್ಲಿರುವ ಪರಮತಮ ಪದವಿಗಾಗೆಳಸುತಿಹೆ. ಸರ್ವಸೃಷ್ಟಿಯ ಹರ್ಷಕಾಗೆಳಸುತಿರುವೆ. ನನ್ನ ಮುಕ್ತಿನೊಂದ

ನಾನೆಂದು ಬಯಸೆ." ಎಂದು. ಇದನ್ನು ಮಾರ ಮೆಚ್ಚಿದರೂ ಮನುಷ್ಯನಾದವನು ಎಂದಾದರೂ ಒಂದು ದಿನ ನನ್ನ ಬಲೆಗೆ ಬೀಳಲೇಬೇಕು. ಆದರೆ ಒಮ್ಮೆ ತಪ್ಪಿದರೂ ನೀನು ಮಹಾತ್ಮನೇ ಎಂದು ಹೊಗಳುತ್ತಾನೆ.

ಸಿದ್ಧಾರ್ಥ ಜಗತ್ತಿನ ಎಲ್ಲ ಭವ ಬಂಧನ, ಆಸೆ–ಆಕಾಂಕ್ಷೆಗಳಿಂದ ಹಂತ ಹಂತವಾಗಿ ದೂರಾಗುತ್ತಾನೆ. ಅದು ಕೈಲಾಸನಿಗೆ ತನ್ನ ಮೈ ಮೇಲಿನ ಒಡವೆಗಳನ್ನು ನೀಡುವುದರಿಂದ ಆರಂಭವಾಗುತ್ತದೆ. ಅನಂತರ ಹೆಂಡತಿ, ಮಗ, ರಾಜ್ಯ, ಅಧಿಕಾರ, ಸಂಪತ್ತು, ನೆಚ್ಚಿನ ಸಾರಥಿ, ಪ್ರೀತಿಯ ಕುದುರೆ ಕಂಥಕ, ಕೊನೆಯಲ್ಲಿ ಭಿಕ್ಷುಕನಿಗೆ ಸಿರಿಯ ಕೇತಗಳೆಲ್ಲವನ್ನೂ ನೀಡಿ ಆತನಿಂದ ಬಡವಸ್ತ್ರಗಳನ್ನು ಪಡೆಯುವುದು ಹೀಗೆ ಆತನ ಮಹಾಪರಿತ್ಯಾಗ ಮುಂದುವರೆಯುತ್ತದೆ. ಜಗತ್ತಿನಲ್ಲಿ ಎಲ್ಲದರಿಂದಲೂ ಮುಕ್ತನಾಗದ ಹೊರತು ಸತ್ಯವನ್ನು ಅರಿಯಲು ಸಾಧ್ಯವಿಲ್ಲ ಎಂಬುದು ಆತನ ನಿಲುವು. ಆದರೆ ಸರ್ವವನ್ನು ತ್ಯಜಿಸಿ, ಆಸಯೇ ದುಃಖಕ್ಕೆ ಮೂಲ ಎಂದು ಹೇಳಿದ ಸಿದ್ಧಾರ್ಥನಿಗೂ ಆಸೆ ಬಿಡುವುದಿಲ್ಲ. ಇದು ವಿಪರ್ಯಾಸವೇ ಸರಿ. ಅರಮನೆಯಿಂದ ತೆರಳುವ ಪೂರ್ವದಲ್ಲಿ ಕೊನೆಯ ಬಾರಿ ಮಗ ರಾಹುಲ ಮತ್ತು ಪತ್ನಿ ಯಶೋಧರೆಯನ್ನು ನೋಡುವ ಬಯಕೆ ಉಂಟಾಗಿ, ಪತ್ನಿಯ ಕೊಠಡಿಗೆ ತೆರಳಿ ಮಗನಿಗೆ ಮುತ್ತಿಟ್ಟು ಹೆಂಡತಿಯನ್ನು ನೋಡುತ್ತಾನೆ. ಆ ಸಮಯದಲ್ಲಿ ಸಿದ್ಧಾರ್ಥನಾಡುವ ಮಾತು " ನಿದ್ರಿಸು, ಯಶೋಧರಾ, ನಿದ್ರಿಸೆಲೆ ತಾಯಿ; ಇಂದು ನಾ ನಿನ್ನ ಸುತ, ಪತಿಯಲ್ಲ, ಪತಿಯಲ್ಲ! ನೀನೆನಗೆ ದೇವತೆ, ನಿನ್ನ ಬಳಿ ನಾ ಸಾರೆ; ನಿನ್ನ ನಾನಿನ್ನೊಲಿಯೆ; ಭಕ್ತಿಯಿಂ ಪೂಜಿಸುವೆ" ಎಂಬುದಾಗಿ. ಯಶೋಧರೆ ಆ ಸಂದರ್ಭದಲ್ಲಿ ಸಿದ್ಧಾರ್ಥನಿಗೆ ತಾಯಿಯ ಹಾಗೆ ಭಾಸವಾಗುತ್ತಾಳೆ. ಇದು ಶ್ರೀ ರಾಮಕೃಷ್ಣ ಪರಮಹಂಸರನ್ನು ನೆನಪಿಸುತ್ತದೆ. ಅವರೂ ಕೂಡ ತಮ್ಮ ಪತ್ನಿ ಶಾರದಾದೇವಿಯನ್ನು ತಾಯಿಯಂತೇ ಕಂಡಿದ್ದರು.

ಸಿದ್ಧಾರ್ಥ ತನ್ನ ದೃಢನಿರ್ಧಾರವನ್ನು ಮುಂದುಮಾಡಿಕೊಂಡು ಸರ್ವವನ್ನು ತ್ಯಜಿಸಿ ಬುದ್ಧನಾಗುವತ್ತ ಆ ರಾತ್ರಿ ಚೆನ್ನನ ಸಮೇತವಾಗಿ ಸಾಗುತ್ತಾನೆ. ಹದಿನಾರು ಯೋಜನಗಳಾಚೆ, ಕೋಲಿ ದೇಶವ ದಾಟಿದ ತರುವಾಯ ವಿಶ್ರಮಿಸುವ ಸಂದರ್ಭದಲ್ಲಿ ಚನ್ನನಿಂದ ದೂರಾಗುತ್ತಾನೆ. ಅನಂತರ ಏಕಾಂಕಿಯಾಗಿ ಮುಂದುವರೆದು ಅನುಮಾ ನದಿಯ ದಡದಲ್ಲಿ ಪ್ರೀತಿಯ ಕುದುರೆಯಾದ ಕಂಥಕನನ್ನೂ ವಾಪಸ್ಸು ಕಳುಹಿಸಿ, ಪೂರ್ಣ ಪ್ರಮಾಣದ ವಿರಾಗಿಯಾಗುತ್ತಾನೆ. ಈ ಸನ್ನಿವೇಶವನ್ನು ಕುರಿತ ಹಾಗೆ ಮತ್ತೆ ಬಹಳ ಸಂಭ್ರಮ ಮತ್ತು ಸಡಗರದಿಂದ ಯಕ್ಷ, ಕಿನ್ನರ ಮತ್ತು ಗಂಧರ್ವರಾಡುವ ಮಾತುಗಳು ಹೀಗಿವೆ;

**ಕಿನ್ನರ:** ನೋಡಲ್ಲಿ! ರವಿಯುದಯ, ಪೂರ್ವಗಿರಿ ಶಿಖರದೊಳ್!
**ಕಿನ್ನರ:** ರವಿಯಿಬ್ಬರೊಂದುದಯ;
ಹಳೆಯ ಸೂರ್ಯನು ಉದಯಗಿರಿ ಶಿಖರದಲಿ!
ಹೊಸ ನೇಸರ್ ಅನುಮಾತರಂಗಿಣಿಯ ತೀರದರೆಯಲ್ಲಿ!
**ಗಂಧರ್ವ:** ಹಳೆಯ ರವಿ ದಿನಪ.
**ಯಕ್ಷ:** ಹೊಸ ರವಿಯು ಜನಪ.

ಇವೆಲ್ಲವೂ ಕುವೆಂಪು ಅವರ ಮನದಾಳದ ಮಾತುಗಳೇ ಆಗಿರುವುದು ಸ್ಪಷ್ಟವಾಗಿ ತಿಳಿಯುತ್ತದೆ.

ನಾಟಕಕಾರರಾದ ಕುವೆಂಪು ಅವರು ವಿಷಮ ಸ್ಥಿಯಿಯಲ್ಲಿದ್ದ ಭಾರತದ ಪರಿಸ್ಥಿತಿಗೆ ಸಿದ್ಧಾರ್ಥ ಬುದ್ಧನಾದುದು ಬಹಳ ಒಳ್ಳೆಯ ಬೆಳವಣಿಗೆ. ಆ ಮೂಲಕ ಅಂದಿನ ಜನರ ಕಲ್ಯಾಣ ಸಾಧ್ಯವಾಯಿತು. ಇಲ್ಲದಿದ್ದಲ್ಲಿ ಅಂದಿನ ಜನರ ಹಿತ ಕಾಯುವವರು ಆ ಪರಿಸ್ಥಿತಿಯಲ್ಲಿ ಯಾರು ಇರಲಿಲ್ಲ ಎಂಬುದನ್ನು ತಿಳಿಸುವ ಪ್ರಯತ್ನ ಮಾಡಿದ್ದಾರೆ. ಅದರ ಜೊತೆ ಜೊತೆಯಲ್ಲಿಯೇ ಪ್ರಸ್ತುತ ಸಂದರ್ಭದಲ್ಲಿಯೂ ಇದೇ ಪರಿಸ್ಥಿತಿ ನಿರ್ಮಾಣವಾಗಿದೆ. ಈಗಿನ ಜನರ ಕಲ್ಯಾಣಕ್ಕಾಗಿ ಮತ್ತೊಬ್ಬ ಬುದ್ಧ ಹುಟ್ಟಿ ಬರಬೇಕಾಗಿದೆ ಎಂಬುದನ್ನು ಕೂಡ ತಿಳಿಸುವ ರೀತಿಯಲ್ಲಿ ನಾಟಕದ ರಚನೆ ಮೂಡಿಬಂದಿದೆ. ಈ ಹಿನ್ನಲೆಯಲ್ಲಿ ಪ್ರಸ್ತುತ ನಾಟಕ ಯಾವುದೋ ಒಂದು ಕಾಲ ಘಟ್ಟಕ್ಕೆ ಮಾತ್ರ ಸೀಮಿತವಾದದ್ದಾಗಿರದೆ ಸರ್ವ ಕಾಲಕ್ಕೂ ಅನ್ವಯವಾಗುವಂತಹುದು ಎಂಬುದನ್ನು ಅರಿಯಬೇಕಾಗಿದೆ.

**ಪರಾಮರ್ಶನ ಗ್ರಂಥಗಳು:**


1. ಎಸ್.ವಿ. ಪರಮೇಶ್ವರಭಟ್ಟ, ರಸಋಷಿ ಕುವೆಂಪು, ಸಂಪುಟ–03, ಪ್ರಸಾರಾಂಗ, ಮೈ.ವಿ.ವಿ.
2. ಡಾ. ಕೆ. ಮರುಳಸಿದ್ದಪ್ಪ: ಆಧುನಿಕ ಕನ್ನಡ ನಾಟಕ, ಅಂಕಿತ ಪುಸ್ತಕ, ಬೆಂಗಳೂರು.
3. ನರಹಳ್ಳಿ ಬಾಲಸುಬ್ರಹ್ಮಣ್ಯಂ: ಕುವೆಂಪು ನಾಟಕಗಳ ಅಧ್ಯಯನ, ಅಂಕಿತ ಪುಸ್ತಕ, ಬೆಂಗಳೂರು.
4. ಡಾ. ಕೆ. ಸದಾಶಿವ: ಪ್ರಾಚೀನ ಭಾರತದ ಇತಿಹಾಸ, ಪ್ರಿಯದರ್ಶಿನಿ ಪ್ರಕಾಶನ, ಮೈಸೂರು.